**ಕರ್ನಾಟಕ ಸರ್ಕಾರ**
**(ಸಿ.ಆರ್.ಪಿ.67)**

**ಹೇಳಿಕೆ ಹಾಳೆ**
**(ಆರ್.ಪಿ.ಸಂಖ್ಯೆ 57)**
**ನಮೂನೆ ಸಂಖ್ಯೆ 4**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 28/2010**

**ಫ್ರಾಸಾ- 47 ಚಾಸಾ- 54**

**Evidence through V.C.**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಬಿ ರಾಜಣ್ಣ |
| ಗಂಡನ ಹೆಸರುಃ | : | ಲೇಟ್ ದಾಸಪ್ಪ |
| ವಯಸ್ಸುಃ | : | 64 ವರ್ಷ |
| ಉದ್ಯೋಗಃ | : | ನಿವೃತ್ತ ಪಿಐ |
| ವಾಸ | : | ಬೆಂಗಳೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 10-03-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಅಕ್ಟೋಬರ್ 2009 ರಿಂದ ಜುಲೈ 2011 ರವರೆಗೆ ಬೆಂಗಳೂರು ಸಿಐಡಿಯಲ್ಲಿ ಪಿಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿನಾಂಕ 20-2-10ರಂದು ಸಿಐಡಿ ಪೊಲೀಸ್ ಉಪಾಧೀಕ್ಷಕರಾಗಿದ್ದ ಚಾಸಾ-58ರವರು ನನಗೆ ಮೆಮೋ ನೀಡಿ ಈ ಪ್ರಕರಣದ 3ನೇ ಆರೋಪಿಯಾದ ಷಹಜಹಾನ್ ಬಗ್ಗೆ ಮಾಹಿತಿ ಸಂಗ್ರಹಿಸಬೇಕೆಂದುತಿಳಿಸಿದರು. ನನ್ನ ಜೊತೆ ಮುಖ್ಯಪೇದೆ ದೇವರಾಜ್ ಮತ್ತು ಪೇದೆ ಪುಟ್ಟೇಗೌಡ ರವರನ್ನು ಹೋಗಲು ತಿಳಿಸಿದರು. ಅದರಂತೆ ನಾವು ದಿನಾಂಕ 21-2-10ರಂದು ಇಲಾಖಾ ವಾಹನದಲ್ಲಿ ರಾತ್ರಿ 10 ಗಂಟೆಗೆ ಬೆಂಗಳೂರಿನಿಂದ ಕೇರಳ ರಾಜ್ಯದ ಸುಲ್ತಾನ್ ಬದ್ದೇರಿಗೆ ಹೋದೆವು.

3.ದಿನಾಂಕ 22-2-10ರಂದು ಬೆಳಿಗ್ಗೆ ಸುಮಾರು 9 ಗಂಟೆಗೆ ಬಾತ್ಮಿದಾರರಿಂದ ಮಾಹಿತಿಯನ್ನು

ಸಂಗ್ರಹಿಸಿ ಆರೋಪಿತನು ಕೋಟಕನ್ ಸರ್ಕಲ್ ಬಳಿ ಇರುವ ಹೋಟೆಲ್ ಸೋಲಾರ್ ಬಳಿ ಇರುತ್ತಾನೆಂದು ಮಾಹಿತಿ ತಿಳಿಸಿದರು. ಅದರಂತೆ ಅಲ್ಲಿಗೆ ಹೋಗಿ ಅಲ್ಲಿದ್ದ ಒಬ್ಬ ಶಂಕಿತ ವ್ಯಕ್ತಿಯನ್ನು ಹಿಡಿದು ವಿಚಾರಿಸಿದಾಗ ಆತ ತನ್ನ ಹೆಸರು ಷಹಜಹಾನ್ ತಂದೆ ಹೆಸರು ಇಬ್ರಾಹಿಂ ಕುಟ್ಟಿ ಎಂದು ತಿಳಿಸಿದನು. ಆತನಿಗೆ ಕನ್ನಡ ಬರುತ್ತಿರಲಿಲ್ಲ.ನನ್ನ ಜೊತೆಇದ್ದ ಮುಖ್ಯಪೇದೆದೇವರಾಜು ರವರ ಮೂಲಕ ಆತನನ್ನು ತಮಿಳಿನಲ್ಲಿ ಮಾತನಾಡಿಸಿ ವಿವರ ಪಡೆದು ಆತನೇ ಈ ಪ್ರಕರಣದ ಆರೋಪಿ ಷಹಜಹಾನ್ ಎಂದು ಖಚಿತವಾದ ಮೇರೆಗೆ ಆತನನ್ನು ವಶಕ್ಕೆ ಪಡೆದು ಆತನ ಬಳಿ ಇದ್ದ ಹಳೆಯ ಸೋನಿ ಎರಿಕ್ಸನ್ ಮೊಬೈಲನ್ನು ವಶಕ್ಕೆ ಪಡೆದೆನು. ನಂತರ ಅದೇ ಫೋನ್ ನಿಂದ ಆತನ ಹೆಂಡತಿ ಮೊಬೈಲ್ ಗೆ ಕರೆ ಮಾಡಿಸಿ ಆತನನ್ನು ವಶಕ್ಕೆ ಪಡೆದ ಬಗ್ಗೆ ಮಾಹಿತಿ ತಿಳಿಸಿದೆನು. ನಂತರ ಆತನನ್ನು ಮತ್ತು ಆಮೊಬೈಲನ್ನು ತೆಗೆದುಕೊಂಡು ವಾಪಸ್ ಸಕಲೇಶಪುರ ಪೊಲೀಸ್ ಠಾಣೆಗೆ ಬಂದು ಅವರನ್ನು ಚಾಸಾ-58ರವರ ಮುಂದೆ ಹಾಜರುಪಡಿಸಿದ ಒಂದು ವರದಿಯನ್ನು ನಿಪಿ-92 ರಂತೆ ನೀಡಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-92(ಎ) ಎಂದು ಗುರುತಿಸಲಾಯಿತು. ವಶಪಡಿಸಿಕೊಂಡ ಮೊಬೈಲನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗ ನೋಡುತ್ತಿದ್ದು ಎಂ.ಒ.12 ಎಂದು ಗುರುತಿಸಲಾಯಿತು. ಸದರಿ ಮೊಬೈಲನ್ನು ವಶಪಡಿಸಿಕೊಳ್ಳುವಾಗ ಅದರಲ್ಲಿ ಪ್ಯಾನೆಲ್ ಇರಲಿಲ್ಲ. ಸದರಿ ಆರೋಪಿತರನನ್ನು ನೋಡಿದರೆ ಗುರುತಿಸುತ್ತೇನೆ. ಆತನ ಮೇಲೆ ಪ್ರಕರಣವನ್ನು ವಿಭಜಿಸಲಾಗಿದೆ.

**ಪಾಟೀಸವಾಲುಃ 1**ಮತ್ತು 2ನೇ ಆರೋಪಿತರ ಪರ ವ**ಕೀಲರಿಂದಃ**

ಇಲ್ಲವೆಂದು ಹೇಳುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**